ದಿನಾಂಕ 20-07-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲುಃ ಶ್ರೀ. ಎನ್.ವಿ.ಆರ್. ಪ್ರತಿವಾದಿ ಪರ ವಕೀಲರಿಂದಃ</u>-**

ಈ ದಾವೆಯಲ್ಲಿ ಪ್ರತಿವಾದಿ ಸಲ್ಲಿಸಿರುವ ತಕರಾರುಗಳನ್ನು ತಿಳಿದುಕೊಂಡಿದ್ದೇನೆ. ನಾನು ದೊಡ್ಡನಾರಾಯಣಸ್ವಾಮಿಯವರ ಹೆಂಡತಿಯಲ್ಲ ಎಂದು ಅವರು ತಕರಾರುಗಳನ್ನು ಸಲ್ಲಿಸಿರುತ್ತಾರೆ. ನಾನು ದೊಡ್ಡನಾರಾಯಣಸ್ವಾಮಿ ಜೊತೆಯಲ್ಲಿ ಲಕ್ಷ್ಮೀದೇವನಕೋಟೆ ಗ್ರಾಮದಲ್ಲಿ ಸಂಸಾರ ಮಾಡಿದ್ದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರ್ ಪಡಿಸಿರುತ್ತೇನೆ. ನಾನು ಆಧಾರ್ ಕಾರ್ಡ್, ರೇಷನ್ ಕಾರ್ಡ್ ಮತ್ತು ನನ್ನ ಗಂಡನ ಮರಣ ಪ್ರಮಾಣ ಪತ್ರಗಳನ್ನು ಹಾಜರ್ ಪಡಿಸಿರುತ್ತೇನೆ.

ಪ್ರತಿವಾದಿಗಳು ಹಾಜರ್ ಪಡಿಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ನಿ.ಪಿ.17 ನ್ನು ನಾನು ನ್ಯಾಯಾಲಯಕ್ಕೆ ಹಾಜರ್ ಪಡಿಸಬೇಕೆಂದು ಸೃಷ್ಟಿಸಿಕೊಂಡು ಬಂದು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಿ.ಪಿ.18 ರಲ್ಲಿ ನನ್ನ ಗಂಡನ ಹೆಸರು ದೊಡ್ಡನಾರಾಯಣಸ್ವಾಮಿ ಎಂದಿಲ್ಲ ಎಂದರೆ ಸರಿಯಲ್ಲ. ನಿ.ಪಿ.19 ರಲ್ಲಿಯೂ ಸಹ ನನ್ನ ಮಗಳ ತಂದೆಯ ಹೆಸರು ದೊಡ್ಡನಾರಾಯಣಸ್ವಾಮಿ ಎಂದು ಇಲ್ಲ ಎಂದರೆ ಸರಿಯಲ್ಲ.

ನಿ.ಪಿ.12, 1 ನೇ ವಾದಿ ವರ್ಗಾವಣೆ ಪ್ರಮಾಣ ಪತ್ರವು ಯದರೂರು ಗ್ರಾಮದ್ದು ದೊಡ್ಡನಾರಾಯಣಸ್ವಾಮಿ ಲಕ್ಷ್ಮಿದೇವನಕೋಟೆ ಎಂದು ನಮೂದು ಆಗಿಲ್ಲ ಎಂದರೆ ಸಾಕ್ಷಿಯು ಯದರೂರು ಗ್ರಾಮದ್ದು ಹೌದು, ಆದರೆ ದೊಡ್ಡನಾರಾಯಣಸ್ವಾಮಿ ಅಂತ ಇದೆ ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿಗಳಿಗೆ ಯಾವ ದಿನಾಂಕದಂದು ಭಾಗ ಕೇಳಿರುತ್ತೇನೆಂದರೆ ಸಾಕ್ಷಿಯು ನಾನು ಭಾಗ ಕೇಳಿಲ್ಲ ಎನ್ನುತ್ತಾರೆ. ಮುಂದುವರೆದು ಸಾಕ್ಷಿಯು ನಾನು ನೋಟಿಸ್ ನ್ನು ಕೊಟ್ಟಿದ್ದೇನೆ ಮತ್ತು ಹೋಗು ಬರುವುದು ಮಾಡುತ್ತಿದ್ದೆ ಎನ್ನುತ್ತಾರೆ. ನೋಟಿಸ್ ನ್ನು ಕೊಡಲು ಮಾಹಿತಿಯನ್ನು ನಾನು ತಾಲ್ಲೂಕು ಕಛೇರಿಯಿಂದ ತಿಳಿದುಕೊಂಡು ಕೊಟ್ಟಿರುತ್ತೇನೆ.

ದೊಡ್ಡನಾರಾಯಣಸ್ವಾಮಿಯ ಹೆಂಡತಿ ವೆಂಕಟಮ್ಮ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೊರಟು ಹೋದ ಮೇಲೆ ಯಾರನ್ನು ಇಟ್ಟುಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಲಕ್ಷ್ಮೀದೇವನಕೋಟೆ ದೊಡ್ಡನಾರಾಯಣಸ್ವಾಮಿಯ ಹೆಂಡತಿಯ ಹೆಸರು ವೆಂಕಟಮ್ಮ ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. ಅವರ ಮದುವೆಯ ಬಗ್ಗೆ ನನಗೆ ಗೊತ್ತಿಲ್ಲ. ಲಕ್ಷ್ಮೀದೇವನಕೋಟೆ ದೊಡ್ಡನಾರಾಯಣಸ್ವಾಮಿರವರ ಹೆಂಡತಿ ವೆಂಕಟಮ್ಮನವರಿಗೆ ರವಿಚಂದ್ರ ಮತ್ತು ಪಾರ್ವತಮ್ಮ ಎಂಬ ಮಕ್ಕಳು ಇದ್ದಾರೆ ಎಂದರೆ ಸಾಕ್ಷಿಯು ಯಾರೋ ಹೇಳಿದ್ದನ್ನು ಕೇಳಿದ್ದೇನೆ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪಾರ್ವತಮ್ಮಳಿಗೆ 30 ವರ್ಷ ವಯಸ್ಸು, ರವಿಚಂದ್ರನಿಗೆ 25 ವರ್ಷ ವಯಸ್ಸಾಗಿದೆ ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ.

ಲಕ್ಷ್ಮೀದೇವನಕೋಟೆಯ ದೊಡ್ಡನಾರಾಯಣಸ್ವಾಮಿ ಕುಟುಂಬದವರ ಜೊತೆಗೆ ಸಂಸಾರ ಮಾಡಿದ್ದನ್ನು ತೋರಿಸಲು ನಾನು ದಾಖಲಾತಿಗಳನ್ನು ಹಾಜರ್ ಪಡಿಸಿಲ್ಲ.

ನನಗೆ ದೊಡ್ಡನಾರಾಯಣಸ್ವಾಮಿಯ ಜೊತೆ ಮದುವೆಯಾಗಿಲ್ಲ ಮತ್ತು ಲಕ್ಷ್ಮೀದೇವನಕೋಟೆಯಲ್ಲಿ ನಾನು ಸಂಸಾರ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಕೆಲವು ದಿನಗಳ ಕಾಲ ನನ್ನ ಹತ್ತಿರ ಬರುತ್ತಿದ್ದರು, ಕೆಲವೊಂದು ಸಲ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ.

ದೊಡ್ಡನಾರಾಯಣಸ್ವಾಮಿರವರು ಅವರ ಹೆಂಡತಿ ವೆಂಕಟಮ್ಮ ಮತ್ತು ಮಕ್ಕಳೊಂದಿಗೆ ಲಕ್ಷ್ಮೀದೇವನಕೋಟೆಯಲ್ಲಿ ಜೀವನ ಸಾಗಿಸಿ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಹತ್ತಿರವೂ ಬರುತ್ತಿದ್ದರು ಎಂದು ನುಡಿಯುತ್ತಾರೆ. ದೊಡ್ಡನಾರಾಯಣಸ್ವಾಮಿರವರ ಹೆಂಡತಿ ವೆಂಕಟಮ್ಮ ಎಂದು ತೋರಿಸಲು ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವೆಂಕಟಮ್ಮರವರು ಅಲ್ಲಿಯೇ ಇದ್ದಾರೆ, ನಾನು ಇಲ್ಲಿಯೇ ಇದ್ದೆ ಎಂದು ನುಡಿಯುತ್ತಾರೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರುತ್ತಾರೆ, ಸಮಯವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**(ಶ್ರೀಮತಿ. ರೂಪಾ.ಸಿ. ವಗ್ಗಾ)**
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.